ದಿನಾಂಕ 08-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಕನ್ನಡ ಭಾಷೆ ಅಷ್ಟೋಂದು ಬರುವದಿಲ್ಲ, ತೆಲುಗು ಭಾಷೆ ಬರುತ್ತದೆ ಎಂದು ತಿಳಿಸಿದ್ದರಿಂದ ಶ್ರೀ. ಎಸ್ ಎ ವಕೀಲರನ್ನು ಭಾಷಾಂತಕಾರರನ್ನಾಗಿ ನೇಮಿಸಿ, ಅವರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ: ಮಾನ್ಯ ಸ.ಸ.ಅ ರವರಿಂದ:-**

1. ಚಾಸಾ-1 ರವರ ಪರಿಚಯ ಇಲ್ಲ, ಆದರೆ ನೋಡಿರುತ್ತೇನೆ. ಚಾಸಾ-3 ರವರ ಪರಿಚಯ ಇದೆ. ಪೋಲೀಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿದ್ದರು. ದಿ.27-03-2016 ರಂದು ಬೆ. 8 ಗಂಟೆಯ ಸುಮಾರಿಗೆ ಮಾರುತಿ ಶೋರೂಂ ಪಕ್ಕದಲ್ಲಿ, ಶಿವನಾಗಪ್ಪರವರ ಕಟ್ಟಡದಲ್ಲಿ ಸಹಿ ಮಾಡಿದ್ದೆ. ಪೋಲೀಸರು 5 ಐಟಂಗಳನ್ನು ತೋರಿಸಿದ್ದರು. ಅವುಗಳೆಂದರೆ ಕರ್ಚೀಫ್, ವಾಚು, ಶರ್ಟ್, ಬನಿಯನ್ & 2 ಚಪ್ಪಲ್. ನಾನು ಅವುಗಳನ್ನು ನೋಡಿದೆ, ಪೋಲೀಸರು ಸಹಿ ಮಾಡು ಎಂದರು, ನಾನು ಸಹಿ ಮಾಡಿದ್ದೆ. ನಿಪಿ-2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು. ಮಾ. ಗಳನ್ನು ನೋಡಿ ಗುರುತಿಸಿರುತ್ತಾರೆ. ಬನಿಯನ್ & ಕರ್ಚೀಫ್ ಮೇಲೆ ರಕ್ತದ ಕಲೆಗಳು ಇವೆ. ನಾನು & ಮಧುಸೂದನ್ ಸಹಿ ಮಾಡಿದ್ದೆವು.

2. 10-30 ರ ಸುಮಾರಿಗೆ ಅದೇ ದಿನ ಪೋಲೀಸ್ ಠಾಣೆಗೆ ನಮ್ಮನ್ನು ಕರೆದುಕೊಂಡು ಹೋದರು. ಠಾಣೆಯಲ್ಲಿ ನಮಗೆ ಮು ಮಾ ಗಳನ್ನು ಪುನಃ ತೋರಿಸಿ, ನನ್ನ & ಮಧುಸೂದನ್ ರವರ ಸಹಿ ಪಡೆದು ಕಳಿಸಿದರು.

3. ಸಾಕ್ಷಿಯು ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು. ನಿಪಿ-3 ನ್ನು 10 ಗಂಟೆಯಿಂದ 1 ತಾಸು ಮಾಡಿದ್ದರು.

4. ಸಾಕ್ಷಿಯು ಮು. ಮಾ. ಗಳ ಮೇಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು:: ಮಾನ್ಯ ಸ.ಸ.ಅ. ರವರಿಂದ::**

ನಿಪಿ-2 ರ ಕಾಲಕ್ಕೆ ಚಾಸಾ-1 ರವರೂ ಸಹ ಇದ್ದರು ಎಂದರೆ ಸರಿ. ನಿಪಿ-2 ರ ಕಾಲಕ್ಕೆ 2 ಚಪ್ಪಲಿಗಳನ್ನು & ವಾಚನ್ನು ಮಾತ್ರ ತೆಗೆದುಕೊಂಡಿದ್ದರು ಎಂದರೆ ಸರಿ. ನಿಪಿ-3 ನ್ನು ರಾ. 12-10 ರಿಂದ 1 ಗಂಟೆಯವರೆಗೆ ಮಾಡಿದ್ದರು ಎಂದರೆ ಸಾಕ್ಷಿಯು ಸಮಯ ಗೊತ್ತಿಲ್ಲ, ಆದರೆ 10 ಗಂಟೆಯ

ಸುಮಾರಿಗೆ ಮಾಡಿದ್ದರು ಎನ್ನುತ್ತಾರೆ. ನಿಪಿ-3 ರ ಕಾಲಕ್ಕೆ ಬನಿಯನ್, ಅಂಗಿ & ಕರ್ಚೀಫ್ ವಶಕ್ಕೆ ಪಡೆದಿದ್ದರು ಎಂದರೆ ಸರಿ. ನಿಪಿ-3 ನ್ನು ರಾತ್ರಿ ಮಾಡಿರುತ್ತಾರೆ ನೀವು ಬೆಳಗ್ಗೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ-**

1. ಪಂಚನಾಮೆಗಳಲ್ಲಿ ಬರೆದಿರುವುದು ನಿಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ಕನ್ನಡ ಬರುವುದಿಲ್ಲ ಆದ್ದರಿಂದ ಗೊತ್ತಿಲ್ಲ ಎನ್ನುತ್ತಾರೆ. ಪೋಲೀಸರು ನನಗೆ ನೋಟೀಸು ಕೊಟ್ಟಿಲ್ಲ. ಸಾಕ್ಷಿಯು ಮುಂದುವರೆದು ರೋಡ್ ಮೇಲೆ ಕರೆದಿದ್ದರು. ನಾನು ಆ ದಿನ ನಮ್ಮ ಹೊಲದಿಂದ ಸಿಂಧನೂರಿಗೆ ಬರುತ್ತಿದ್ದೆ. ಪಂಚನಾಮೆಯ ಕಾಲಕ್ಕೆ ಇಬ್ಬರು ಸೇರಿದ್ದರು.

2. ನಾನು ಒಟ್ಟು 2 ಸಹಿಗಳನ್ನು ಮಾಡಿದ್ದೆ, ಆ ಸಹಿಗಳನ್ನು ಬಿಟ್ಟು ಬೇರೆಲ್ಲೂ ಸಹಿಗಳನ್ನು ಮಾಡಿಲ್ಲ.

3. ಚಪ್ಪಲಿಯ ಬಣ್ಣ ಬ್ರೌನ್ ಕಲರ್ ಇತ್ತು, ಬನಿಯನ್ ಬಿಳಿ ಬಣ್ಣದ್ದು ಇತ್ತು, ವಾಚ್ ಗೋಲ್ಡ್ ಕಲರ್‌ನದು ಇತ್ತು, ಅದು ಯಾವ ಕಂಪನಿ ಎಂದು ನಾನು ನೋಡಿಲ್ಲ. ಕರ್ಚೀಫ್‌ನ ಬಣ್ಣ ಏನು ಎಂದರೆ ಸಾಕ್ಷಿಯು ಬಣ್ಣ ಏನು ಎಂದು ಗೊತ್ತಿಲ್ಲ, ಆದರೆ ಚೆಕ್ಸ್ ಕರ್ಚೀಫ್ ಇತ್ತು. ಪೋಲೀಸರು ಪಂಚನಾಮೆಯನ್ನು 1 ಗಂಟೆ ಬರೆದಿದ್ದರು.

4. ನಿಪಿ-2 ರ ಚೆಕ್ ಬಂದಿ ಹೇಳಲು ಬರುವುದಿಲ್ಲ. ಅದು ಶಿವನಾಗಪ್ಪರವರ ಕಟ್ಟಡ ಎಂದು ನಿಮಗೆ ಯಾರು ಹೇಳಿದ್ದು ಎಂದರೆ ಸಾಕ್ಷಿಯು ನಾನು ತಿಂಗಳಿಗೊಮ್ಮೆ ಕರೆಂಟ್ ಬಿಲ್ ಕಟ್ಟಲು & ಕಾರ್ ಸರ್ವೀಸ್ ಗೆ ಬರುತ್ತೇನೆ, ಆಗ ನನಗೆ ಹೇಳಿದ್ದರು, ನನಗೆ ಗೊತ್ತಿತ್ತು ಎನ್ನುತ್ತಾರೆ.

5. ಈ ದಿನ ನ್ಯಾಯಾಲಯಕ್ಕೆ ಪೋಲೀಸರು ಕರೆದಿದ್ದರಿಂದ ಬಂದಿದ್ದೇನೆ. ಚಾಸಾ-1 ರವರು ನಿಮ್ಮೊಂದಿಗೆ ಈ ದಿನ ತೆರೆದ ನ್ಯಾಯಾಲಯದಲ್ಲಿ ಕುಳಿತು ನಿಮಗೆ ಹೇಳಿಕೊಡುತ್ತಿದ್ದರು ಎಂದರೆ ಸಾಕ್ಷಿಯು ಇಲ್ಲ ಹೇಳಿಕೊಡುತ್ತಿರಲಿಲ್ಲ ಎನ್ನುತ್ತಾರೆ.

6. 2 ನೇ ಪಂಚನಾಮೆಯನ್ನು ಮಾಡುವ ಕಾಲಕ್ಕೆ ನಾವಿಬ್ಬರು ಸೇರಿದ್ದೆವು, ಆದರೆ ಬೇರೆ ಯಾರು ಸೇರಿದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ-3 ನ್ನು ಒಂದು ಗಂಟೆಯ ಕಾಲ ಮಾಡಿದ್ದರು.

7. ಮೊದಲು ನೀವು 5 ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದರು ಎಂದು ಹೇಳಿದ್ದೀರಿ ನಂತರ 2 ಚಪ್ಪಲಿಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತೀರಿ ಅವುಗಳಲ್ಲಿ ಯಾವುದು ನಿಜ ಎಂದರೆ ಸಾಕ್ಷಿಯು 5 ವಸ್ತುಗಳನ್ನು ವಶಪಡಿಸಕೊಂಡಿದ್ದರು ಎಂದು ಹೇಳಿರುವುದು ನಿಜ ಎನ್ನುತ್ತಾರೆ.

8. ನನ್ನ ಸೋಲಾರ್ ಪೆನಾಲನ್ನು ನಾನು ನೊಂದಣಿ ಮಾಡಿಸಿರುತ್ತೇನೆ. ಅದರಲ್ಲಿ ನಿಮಗೆ ಲಾಸ್ ಆಗಿತ್ತು ಎಂದರೆ ಸರಿಯಲ್ಲ. ಸೋಲಾರನ್ನು ಚಾಸಾ-1 ರವರು ರಿಜಿಸ್ಟರ್ ಮಾಡಿಸಿಕೊಟ್ಟಿದ್ದರು ಎಂದರೆ ಸಾಕ್ಷಿಯು ಚಾಸಾ-1 ರವರು ಎಕ್ಸಿಕ್ಯೂಟಿವ್ ಆಗಿದ್ದು, ಎ ಇಇ ರವರು ಮಾಡಿಸಿಕೊಟ್ಟಿದ್ದರು ಎನ್ನುತ್ತಾರೆ. ಚಾಸಾ-1 ರವರು ನಿಮ್ಮ ಆತ್ಮೀಯರು ಎಂದರೆ ಸಾಕ್ಷಿಯು ಇಲ್ಲ ಒಮ್ಮೆ ಅವರನ್ನು ನೋಡಿದ್ದೆ ಎನ್ನುತ್ತಾರೆ. ನಿಮಗೆ ಸದರಿ ಸೋಲಾರ್‌ನಲ್ಲಿ ಕೋಟಿಗಟ್ಟಲೆ ನಷ್ಟ ಆಗಿತ್ತು, ಅದರಲ್ಲಿ ನೀವು & ಚಾಸಾ-1 ರವರು ಪಾಲುದಾರರಾಗಿದ್ದಿರಿ ಎಂದರೆ ಸರಿಯಲ್ಲ. ಆದ್ದರಿಂದ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಸಾಮಾನ್ಯವಾಗಿ ಹಳೆ ಚಪ್ಪಲಿ, ಬನಿಯನ್, ಕರ್ಚೀಫ್ ಸಿಗುತ್ತವೆ ಎಂದರೆ ಸರಿ.

10. ನಿಮಗೆ ಈ ದಿನ ಪೋಲೀಸರು ಕರೆಸಿಲ್ಲ, ಚಾಸಾ-1 ರವರು ನಿಮ್ಮನ್ನು ಕರೆದುಕೊಂಡು ಬಂದಿರುತ್ತಾರೆ, ನಿಮಗೆ ನ್ಯಾಯಾಲಯದಿಂದ ಯಾವುದೇ ಸಮನ್ಸ್ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

11. ನಿಮ್ಮನ್ನು ಚಾಸಾ-1 ರವರು ಅ.ಸ.ಸ ರವರ ಕಛೇರಿಗೆ ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿಯು ಸೀದಾ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ, ತೆರೆದ ನ್ಯಾಯಾಲಯದಲ್ಲಿ ಕೂರು ಎಂದರು, ಕೂತಿದ್ದೆ ಎನ್ನುತ್ತಾರೆ.

12. ಪಂಚನಾಮೆಗಳನ್ನು ಮಾಡಿದ ವಾರ ಗೊತ್ತಿಲ್ಲ, ಆದರೆ ದಿ.27-03-2016 ರಂದು ಮಾಡಿದ್ದರು. ನಿಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ, ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**

**ಭಾಷಾಂತರಕಾರರ ಸಹಿ:**